ಅವರುಗಳನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಯಾವುದೇ ರೀತಿಯಲ್ಲಿ ಹಿಂದೇಟು ಹಾಕುವುದಿಲ್ಲ. ಈಗ ತೊಂದರೆಯಿದೆ ಅದು ನಮಗೆ ಗೊತ್ತಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ : ಕೆಎಟಿಯಲ್ಲಿ ಏನು ಹೇಳಿದರು ಪಾರ್ಟ್‌ಟೈಮ್ ಲೆಕ್ಚರರ್ಸ್‌ಗಳನ್ನು ಆಪಾಯಿಂಟ್ ಮಾಡುವುದು ಬ್ಯಾಕ್‌ಡೋರ್ ಎಂಟ್ರಿಯಾಗುತ್ತದೆ ಎಂದು ಏಕೆ ಬ್ಯಾಕ್ ಡೋರ್ ಎಂಟ್ರಿಯಾಯಿತು? ಫ್ರಂಟ್‌ಡೋರ್ ಎಂಟ್ರಿಗೆ ತಾವು ಅವಕಾಶ ಕೊಡದ ಕಾರಣ ಬ್ಯಾಕ್‌ಡೋರ್ ಎಂಟ್ರಿ ಅವಕಾಶವಾಯಿತು. ಆದರೂ ಕೂಡ 1994-95ರವರೆಗೆ ಯಾರ್ಯಾರು ಕೆಲಸ ಮಾಡುತ್ತಿದ್ದರು ಅವರ ಸಂಖ್ಯೆ ಎಷ್ಟು? ಅವರುಗಳನ್ನು ಖಾಯಂ ಮಾಡುವುದಕ್ಕೆ ಹೈಕೋರ್ಟ್‌ನಲ್ಲಿ ಪುನಃ ರಿಟ್ ಹಾಕಿದ್ದೇವೆಂದರೆ, ಬೇರೆಲ್ಲಾ ಕಾನೂನುಗಳನ್ನು ನೀವೇನು ಮಾಡುತ್ತೀರಿ? ಒಂದು ಕೋರ್ಟ್‌ನಲ್ಲಿ ಯಾವುದಾದರೂ ರಿಜೆಕ್ಟ್ ಆದರೆ ಅದನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತೊಂದು ಮಾಡಲು ಕ್ರಮ ತೆಗೆದುಕೊಳ್ಳುತ್ತೀರಿ. ಉದಾಹರಣೆಗೆ ಅರಮನೆ ಭೂಮಿ ಬಗ್ಗೆ ಸುಪ್ರೀಂಕೋರ್ಟ್ ಆದೇಶ ಆದಮೇಲೆ ನೀವೇನು ಮಾಡಿದಿರಿ? ಹೊಸ ಕಾನೂನು ತರುತ್ತೇವೆ, ಇದೇ ಸದನದಲ್ಲಿ ಅದನ್ನು ಮಂಡನೆ ಮಾಡುತ್ತೇವೆ ಅದನ್ನು ನಮ್ಮ ವಶಕ್ಕೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಬಹುಶಃ ಇದು ಇಡೀ ರಾಜ್ಯದ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳ ಭವಿಷ್ಯದ ಪ್ರಶ್ನೆ. ಇದರ ಬಗ್ಗೆ ವಿಶೇಷವಾದ ಕಾನೂನು ಮಾಡಲಿಕ್ಕೆ ಸರ್ಕಾರ ಏಕೆ ಹಿಂದೇಟು ಹಾಕುತ್ತಿದೆ? ತಾವು ಏಕೆ ಆ ಕೆಲಸ ಮಾಡಬಾರದು? ಈ ಕೆಲಸವನ್ನು ಮಾಡುವ ಉದ್ದೇಶ ರಾಜ್ಯಸರ್ಕಾರಕ್ಕೆ ಇದೆಯೇ? ಇದ್ದರೆ ಯಾವಾಗ ಮಾಡಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ : ಅರೆಕಾಲಿಕ ಉಪನ್ಯಾಸಕರುಗಳ ಬಗ್ಗೆ ನಾವು ಕೂಡಲೇ ಏನೂ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವರುಗಳೆಲ್ಲಾ ಕೋರ್ಟ್‌ಗೆ ಹೋಗಿರುವುದರಿಂದ, ಕೋರ್ಟ್‌ನಿಂದ ನಮಗೆ ತೀರ್ಮಾನ ಬರಬೇಕು. ಉಪನ್ಯಾಸಕರುಗಳನ್ನು ಕಾಲೇಜುಗಳಿಗೆ ಯಾವರೀತಿ ಒದಗಿಸಬೇಕೆನ್ನುವ ಬಗ್ಗೆ ಸರ್ಕಾರ ಯೋಚನೆ ಮಾಡುತ್ತದೆ.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಯಸ್ಕರ ಶಿಕ್ಷಣ ಸಚಿವರನ್ನು ಮಾನ್ಯ ಡಿ.ಆರ್. ಪಾಟೀಲ್‌ರವರ ಪರವಾಗಿ ಅವರ ಹೆಸರಿನಲ್ಲಿರತಕ್ಕ ಪ್ರಶ್ನೆಯನ್ನು ಕೇಳಲು ತಾವು ಅವಕಾಶ ಕೊಡಬೇಕು.

ರಾಜ್ಯದ ಸಾಕ್ಷರತಾ ಪ್ರಮಾಣ

341- ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ವಯಸ್ಕರ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ವೃತ್ತಿ ಮತ್ತು ಸರ್ಕಾರಿ ಮುದ್ರಣಾಲಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ರ ಜನಗಣತಿಯಂತೆ ರಾಜ್ಯದ ಸಾಕ್ಷರತಾ ಪ್ರಮಾಣ ಎಷ್ಟು?

ಆ) 1997ರ ಅಂತ್ಯದಲ್ಲಿ ಸಾಧಿಸಲಾಗಿರುವ ಸಾಕ್ಷರತಾ ಪ್ರಮಾಣ ಎಷ್ಟು?

ಇ) *ರಾಜ್ಯದಲ್ಲಿ ಜಿಲ್ಲಾವಾರು ಸಾಕ್ಷರತಾ ಪ್ರಮಾಣದಲ್ಲಿ ವ್ಯತ್ಯಾಸವಿದೆಯೇ? ಜಿಲ್ಲಾವಾರು ವಿವರ ನೀಡುವುದು?*

ಈ) *ರಾಷ್ಟ್ರದಲ್ಲಿ ಸಾಕ್ಷರತಾ ಪ್ರಮಾಣದಲ್ಲಿ ರಾಜ್ಯದ ಸ್ಥಾನ ಎಷ್ಟಿದೆ?*

ಉ) *ಸಾಕ್ಷರತಾ ಪ್ರಮಾಣ ಅತ್ಯಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?*

ಊ) *ರಾಜ್ಯದಲ್ಲಿ ಗಂಡು ಹಾಗೂ ಹೆಣ್ಣು ಮಕ್ಕಳ ಮಧ್ಯೆ ಸಾಕ್ಷರತಾ ಪ್ರಮಾಣದಲ್ಲಿ ಇರುವ ಅಂತರ ಎಷ್ಟು? ಈ ಅಂತರ ನಿವಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ?*

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ, ಸಾರ್ವಜನಿಕ, ಗ್ರಂಥಾಲಯ, ಹಾಗೂ ವೃತ್ತಿ ಶಿಕ್ಷಣ ಮತ್ತು ಸರ್ಕಾರಿ ಮುದ್ರಣಾಲಯ ಸಚಿವರು) :

ಅ) ಶೇಕಡ 56.04

ಆ) ಸಾಕ್ಷರತಾ ಪ್ರಮಾಣವನ್ನು ಅಧಿಕೃತವಾಗಿ ಜನಗಣತಿಯಲ್ಲಿ ಮಾತ್ರ ಲೆಕ್ಕ ಹಾಕಲಾಗುತ್ತಿದೆ. 1981-91ರ ಅವಧಿಯಲ್ಲಿ ರಾಜ್ಯದಲ್ಲಿ ಶೇಕಡ 10ರಷ್ಟು ಸಾಕ್ಷರತಾ ಪ್ರಮಾಣ ವೃದ್ಧಿಯಾಗಿದೆ. 1991ರ ಜನಗಣತಿಯಂತೆ ರಾಜ್ಯದಲ್ಲಿ 163 ಲಕ್ಷ ಅನಕ್ಷರಸ್ಥರಿದ್ದು ಇವರಲ್ಲಿ 76 ಲಕ್ಷ 9-35 ಪ್ರಾಯದ ಅನಕ್ಷರಸ್ಥರು ಎಂದು ಗುರುತಿಸಲಾಗಿದೆ. 31.3.97ರ ಅಂತ್ಯದ ವೇಳೆಗೆ ಇವರಲ್ಲಿ 35 ಲಕ್ಷ ಜನರು ಸಾಕ್ಷರಸ್ಥರಾಗಿದ್ದಾರೆ. ಇದರನ್ವಯ 1997ರ ಅಂತ್ಯದಲ್ಲಿ ಸಾಧಿಸಿರುವ ಸಾಕ್ಷರತಾ ಪ್ರಮಾಣ ಸುಮಾರು ಶೇಕಡ 68 ಆಗಿರಬಹುದೆಂದು ಅಂದಾಜಿಸಲಾಗಿದೆ.

ಇ) ಹೌದು. ಜಿಲ್ಲಾವಾರು ವಿವರ ಈ ಕೆಳಕಂಡಂತಿದೆ.

1.	ಬೆಂಗಳೂರು ನಗರ	ಶೇಕಡ	76.27
2.	ಬೆಂಗಳೂರು (ಗ್ರಾ)	-"-	50.17
3.	ಬೆಳಗಾಂ	-"-	53
4.	ಬಳ್ಳಾರಿ	-"-	45.57
5.	ಬೀದರ್	-"-	45.11
6.	ಬಿಜಾಪುರ	-"-	55.33
7.	ಚಿಕ್ಕಮಗಳೂರು	-"-	61.05
8.	ಚಿತ್ರದುರ್ಗ	-"-	55.48
9.	ದಕ್ಷಿಣ ಕನ್ನಡ	-"-	75.86
10.	ಧಾರವಾಡ	-"-	58.68
11.	ಗುಲ್ಬರ್ಗಾ	-"-	38.54

12. ಹಾಸನ	-"-	56.85
13. ಕೊಡಗು	-"-	68.35
14. ಕೋಲಾರ	-"-	50.45
15. ಮಂಡ್ಯ	-"-	48.15
16. ಮೈಸೂರು	-"-	47.32
17. ರಾಯಚೂರು	-"-	35.96
18. ಶಿವಮೊಗ್ಗ	-"-	61.53
19. ತುಮಕೂರು	-"-	54.48
20. ಉತ್ತರ ಕನ್ನಡ	-"-	66.73

ಈ) ದೊಡ್ಡ ರಾಜ್ಯಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯವು ಸಾಕ್ಷರತೆಯಲ್ಲಿ 7ನೇ ಸ್ಥಾನದಲ್ಲಿ ಇದೆ. ಒಟ್ಟಾರೆ ಕೇಂದ್ರಾಡಳಿತ ಪ್ರದೇಶಗಳು ಮತ್ತು ಸಣ್ಣ ರಾಜ್ಯಗಳನ್ನು ತೆಗೆದುಕೊಂಡು ಹೋಲಿಸಿದಾಗ ರಾಜ್ಯವು 20ನೇ ಸ್ಥಾನದಲ್ಲಿ ಇದೆ.

ಉ) ಸಾಕ್ಷರತಾ ಪ್ರಮಾಣ ಅತ್ಯಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸಲು ಸಾಕ್ಷರತಾ ಆಂದೋಲನಗಳನ್ನು ಹಮ್ಮಿಕೊಳ್ಳಲಾಗಿದೆ. ಸಾಕ್ಷರತಾ ಆಂದೋಲನಕ್ಕೆ ಪೂರಕವಾಗಿ ಪುನಶ್ಚೇತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಊ) ರಾಜ್ಯದಲ್ಲಿ ಒಟ್ಟು ಸಾಕ್ಷರತಾ ಪ್ರಮಾಣ ಶೇಕಡ 56.04, ಹೆಣ್ಣು ಮಕ್ಕಳ ಸಾಕ್ಷರತಾ ಪ್ರಮಾಣ 44.34, ಗಂಡಸರ ಸಾಕ್ಷರತಾ ಪ್ರಮಾಣ 67.26, ಗಂಡಸರ ಮತ್ತು ಹೆಂಗಸರ ಸಾಕ್ಷರತಾ ಪ್ರಮಾಣ ವ್ಯತ್ಯಾಸ 22.88 ಆಗಿದೆ.

ಈ ಅಂತರ ನಿವಾರಿಸಲು ಸಾಕ್ಷರತಾ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ. ಸಾಕ್ಷರತಾ ಆಂದೋಲನದಲ್ಲಿ ಗುರುತಿಸಿದ ಅನಕ್ಷರಸ್ಥರು ಸುಮಾರು 70ರಷ್ಟು ಮಹಿಳೆಯರು ಆಗಿರುತ್ತಾರೆ. ಸಾಕ್ಷರತಾ ಆಂದೋಲನದಲ್ಲಿ ಆಸಕ್ತಿ ತೋರಿಸುತ್ತಿರುವವರಲ್ಲಿ ಹೆಚ್ಚಿನವರು ಮಹಿಳೆಯರೇ ಆಗಿರುತ್ತಾರೆ. ರಾಜ್ಯದಲ್ಲಿ ಇಲ್ಲಿಯವರೆಗೆ 39.43 ಲಕ್ಷ ಜನರು ಸಾಕ್ಷರತೆಯನ್ನು ಪಡೆದುಕೊಂಡಿದ್ದು ಅವರಲ್ಲಿ 23.17 ಲಕ್ಷ ಮಹಿಳೆಯರು ಆಗಿರುತ್ತಾರೆ.

ಶ್ರೀ ಜೆ.ಟಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, 1997ರ ಅಂತ್ಯದಲ್ಲಿ ಸಾಕ್ಷರತೆಯ ಪ್ರಮಾಣದಲ್ಲಿ ನಮ್ಮ ರಾಜ್ಯಸರ್ಕಾರದವರು ಮಾಡಿದ ಸಾಧನೆ 66 ಪರ್ಸೆಂಟ್, ನೂರಕ್ಕೆ ನೂರರಷ್ಟು ಸಾಧನೆ ಮಾಡುತ್ತೇವೆಂದು ಹೇಳಿ ಹಣಕಾಸನ್ನು ವೆಚ್ಚಮಾಡಿ ಕೇವಲ 66ಪರ್ಸೆಂಟ್ ಸಾಧನೆ ಮಾಡಲು ಕಾರಣವೇನು? ಅದಕ್ಕೆ ತಪ್ಪಿತಸ್ಥರು ಯಾರು ಎನ್ನುವ ಬಗ್ಗೆ ಮಂತ್ರಗಳು ಉತ್ತರ ಕೊಡಬೇಕು. ಎರಡನೆಯ ಪ್ರಶ್ನೆಗೆ ರಾಜ್ಯದಲ್ಲಿ ಜಿಲ್ಲಾವಾರು ಸಾಕ್ಷರತೆಯ ಪ್ರಮಾಣದಲ್ಲಿ ವ್ಯತ್ಯಾಸವಿದೆಯೆಂದು ಅವರು ಉತ್ತರ ಕೊಟ್ಟಿದ್ದಾರೆ. ಕೇವಲ ನಾಲ್ಕು ಜಿಲ್ಲೆಗಳು ಬೆಂಗಳೂರುನಗರ, ದಕ್ಷಿಣ ಕನ್ನಡ, ಕೊಡಗು ಮತ್ತು

ಉತ್ತರ ಕನ್ನಡ ಈ ನಾಲ್ಕು ಜಿಲ್ಲೆಗಳನ್ನು ಬಿಟ್ಟರೆ ಯಾವುವು ಕನಿಷ್ಟ ಪ್ರಮಾಣಕ್ಕೆ ಮುಟ್ಟಿಲ್ಲ. ಇದಕ್ಕೆ ಯಾರು ಹೊಣೆ ಎನ್ನುವ ಮಾತನ್ನು ಕೇಳುತ್ತೇನೆ. ದುರ್ದೈವದ ಸಂಗತಿ ದೇಶದಲ್ಲಿ ನಮ್ಮ ರಾಜ್ಯ ಸಾಕ್ಷರತೆಯಲ್ಲಿ 20ನೇಯ ಸ್ಥಾನದಲ್ಲಿದೆ. ತಾವು ಪ್ರಚಾರ ಮಾಡುವಾಗ ನಾವು ನೂರಕ್ಕೆ ನೂರರಷ್ಟು ಸಾಧನೆ ಮಾಡುತ್ತೇವೆ, ರಾಜ್ಯದಲ್ಲಿ ಸಾಕ್ಷರತೆಯ ಬಗ್ಗೆ ಸಾಕಷ್ಟು ಪ್ರಮಾಣದಲ್ಲಿ ಉತ್ತಮ ರೀತಿಯಲ್ಲಿ ಸಾಧನೆಯಿದೆ ಎನ್ನುವ ಮಾತನ್ನು ಹಲವಾರು ಜಾಹೀರಾತುಗಳ ಮುಖಾಂತರ ನಾವು ನೋಡುತ್ತಿದ್ದೇವೆ, ಕೇಳುತ್ತಿರುತ್ತೇವೆ ಆದರೆ ನಿಮ್ಮ ಸಾಧನೆ ಮಾತ್ರ ಶೂನ್ಯ. ಇದಕ್ಕೆ ಯಾರು ಹೊಣೆ? ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳಿಗೂ ಸಾಕ್ಷರತೆಯ ಪ್ರಮಾಣದಲ್ಲಿ ಸಾಕಷ್ಟು ವ್ಯತ್ಯಾಸವಿದೆ. ಅದನ್ನು ಸಹಿತ ನಿಖರವಾಗಿ ಹೇಗೆ ಸರಿದೂಗಿಸುತ್ತೀರಿ, ಅದರ ಬಗ್ಗೆ ತಾವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎನ್ನುವ ಮಾತನ್ನು ತಾವು ಹೇಳಬೇಕು.

ಶ್ರೀ ಆರ್. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಹೆಣ್ಣುಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಅಸಕ್ತಿಯಿಂದ ಕಲಿತಿರುವುದುಂಟು. ಗಂಡಸರದ್ದು ಸ್ವಲ್ಪ ಕಡಿಮೆಯಾಗಿರುವುದುಂಟು. 64 ಪರ್ಸೆಂಟ್ ಸಾಧನೆಯಾಗಿದೆ. ಕಳೆದ 10 ವರ್ಷಗಳಲ್ಲಿ ಸುಮಾರು 10 ಪರ್ಸೆಂಟ್ ಜಾಸ್ತಿಯಾಗಿರುವುದರಿಂದ ಈ ಮಟ್ಟಕ್ಕೆ ಬಂದಿದೆ. ಈ ಸಾರಿ ಕೂಡ 2001ನೇ ಇಸವಿಯಲ್ಲಿ ಜನಗಣತಿ ಮಾಡಿದಾಗ ನಿಖರವಾದ ಮಾಹಿತಿ ಸಿಗುತ್ತದೆ. ಆಗ ಮಾಹಿತಿ ಕೊಡಬಹುದು, ಈಗ ಸಂದರ್ಭನುಸಾರವಾಗಿ ಅಬ್ಸರ್ವೇಶನ್ ಮಾಡಿ ಈ ಮಾಹಿತಿ ಕೊಟ್ಟಿರುವುದು.

ಅಧ್ಯಕ್ಷರು : 10 ಪರ್ಸೆಂಟ್ ಇಂಪ್ರೂವ್ ಮಾಡಲಿಕ್ಕೆ ಹಣ ಎಷ್ಟು ಖರ್ಚಾಗಿದೆ?

ಶ್ರೀ ಆರ್. ಕೃಷ್ಣಪ್ಪ : ಆ ವಿವರ ತರಿಸಿ ಕೊಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೆ, ಸಾಕ್ಷರತೆ ಯೋಜನೆಯಡಿಯಲ್ಲಿ ಕೋಟಿಗಟ್ಟಲೆ ಹಣವನ್ನು ನುಂಗಿರುವ ಬಗ್ಗೆ ತುಮಕೂರು ಜಿಲ್ಲೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸಿಒಡಿ ಎನ್‌ಕ್ವಾಯರಿ ಇನ್ನೂ ಮುಗಿದಿಲ್ಲ. ಈ ಪ್ರಶ್ನೆ ಕೇಳಿ ನಾಲ್ಕು ವರ್ಷ ಆಯಿತು.

ಅಧ್ಯಕ್ಷರು : ಸಿಓಡಿ. ಸಿಬಿಐ ಎನ್‌ಕ್ವಾಯರಿ ಸಾಕ್ಷರತೆಯಿಂದ ಹಿಡಿದು ನದಿ ನೀರಿನವರೆಗೂ ಈ ವ್ಯವಹಾರದಲ್ಲಿ ಭಗವಂತನ ಅವತಾರವಾಗಿ ಬಿಟ್ಟಿದೆ.

ಶ್ರೀ ಟಿ.ಬಿ. ಜಯಚಂದ್ರ : ಎನ್‌ಕ್ವಾಯರಿಗೆ ರೆಫರ್ ಮಾಡಿ ನಾಲ್ಕು ವರ್ಷಗಳಾಯಿತು. ಇದುವರೆಗೆ ಅದು ಯಾವ ಸ್ಟೇಜ್‌ನಲ್ಲಿದೆ ಎಂಬುದು ಗೊತ್ತಿಲ್ಲ. ಎಷ್ಟು ಖರ್ಚಾಗಿದೆ ಎನ್ನುವುದು ಎನ್‌ಕ್ವಾಯರಿಯಲ್ಲಿದೆ.

ಶ್ರೀ ಜಿ.ಟಿ. ಪಾಟೀಲ್ : ನೂರಕ್ಕೆ ನೂರರಷ್ಟು ಸಾಧನೆ ಮಾಡಿದ್ದೇವೆಂದು ಎಲ್ಲಾ ಹಣವನ್ನು ವೆಚ್ಚ ಮಾಡಿದ್ದಾರೆ. ಸಾಧನೆ ಮಾಡಿದ್ದು ಕೇವಲ 66 ಪರ್ಸೆಂಟ್. ಇದಕ್ಕೆ ಹೊಣೆ ಯಾರು?

ಅಧ್ಯಕ್ಷರು : ಸಾಧನೆ ಏನೆಂದರೆ, ಆ ಕಾರ್ಯಕ್ರಮಕ್ಕೆ ಮೀಸಲಾಗಿಟ್ಟಿದ್ದ ಹಣ ಏನಿದೆ ಅದನ್ನು ಪೂರ್ಣ ವೆಚ್ಚ ಮಾಡಿದ್ದೇವೆಂದೂ ಅದರಲ್ಲಿ ಏನೂ ಬಾಕಿ ಉಳಿಸಿಲ್ಲವೆಂದು ಅವರು ಹೇಳಿರುವುದು.

ಡಾ|| ಎಂ. ಪಿ. ಕರ್ಕಿ : ಹಣ ಖರ್ಚು ಮಾಡುವುದೇ ಗುರಿಯಾದರೆ ಅದಕ್ಕೆ ವಯಸ್ಕರ ಶಿಕ್ಷಣ ಸಚಿವರು ಬೇಕಾಗಿಲ್ಲ, ಯಾರೂ ಬೇಕಾಗಿಲ್ಲ.

MR. SPEAKER : It is very interesting subject. Let us discuss it later...

ಹಿಂದಿ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವುದು.

342 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕಡ್ಡಾಯ ಮಾಡಿದ್ದರೂ, ಹಿಂದಿ ಕಲಿಸುವ ಶಿಕ್ಷಕರುಗಳ ಬಹುತೇಕ ಹುದ್ದೆಗಳನ್ನು ಭರ್ತಿ ಮಾಡದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಕೆಲವು ಪ್ರೌಢ ಶಾಲೆಗಳಲ್ಲಿ ಹಿಂದಿ ಶಿಕ್ಷಕರುಗಳ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಾಜ್ಯ ಪ್ರೌಢ ಶಾಲೆಗಳಲ್ಲಿ ಒಟ್ಟು 748 ಹಿಂದಿ ಶಿಕ್ಷಕರ ಹುದ್ದೆ ಖಾಲಿ ಇದ್ದು, ಈ ಪೈಕಿ 398 ಹುದ್ದೆಗಳನ್ನು ನೇರ ನೇಮಕಾತಿಯಿಂದ ತುಂಬುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಉಳಿದ 350 ಹುದ್ದೆಗಳನ್ನು ಸೂಕ್ತ ವಿದ್ಯಾರ್ಹತೆ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಜೇಷ್ಠತೆ ಆಧಾರದ ಮೇಲೆ ಬಡ್ತಿ ನೀಡಿ ತುಂಬಲಾಗುವುದು.

ಶ್ರೀ ಎ.ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೆ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹಿಂದಿ ವಿಷಯವನ್ನು ಕಡ್ಡಾಯ ಮಾಡಿದ್ದೀರಿ. ಹಿಂದಿ ನಮ್ಮ ರಾಷ್ಟ್ರಭಾಷೆ ಅದನ್ನು ಕಲಿಯಬೇಕು. ಅದಕ್ಕೆ ನಮ್ಮದೂ ಕೂಡ ಅಭ್ಯಂತರವಿಲ್ಲ. ಆದರೆ ಬಹುತೇಕ ಪ್ರೌಢಶಾಲೆಗಳಲ್ಲಿ ಹಿಂದಿ ಶಿಕ್ಷಕರ ಕೊರತೆಯಿದೆ. ಇದು ಬೇರೆ ವಿಷಯಗಳ ಹಾಗೆ ಇದು ಆಗುವುದಿಲ್ಲ. ಹಿಂದಿ ಗೊತ್ತಿದ್ದ ಶಿಕ್ಷಕರೇ ಹಿಂದಿಯನ್ನು ಕಲಿಸಬೇಕಾಗುತ್ತದೆ. ಹೇಳಿ ಕೊಟ್ಟಿದ್ದನ್ನು ಕಲಿಯುವುದು ಕಷ್ಟ. ಇಂತಹ ಕಾಲದಲ್ಲಿ ಹೇಳಿಕೊಡದಿರುವುದನ್ನು ಕಲಿತುಕೊಂಡು ಪರೀಕ್ಷೆಗಳಲ್ಲಿ ಬರೆಯಿರಿ ಅಂದರೆ ಇಲ್‌ಲೀಗಲ್ ಆಕ್ಟಿವಿಟೀಸ್‌ಗೆ ಸರ್ಕಾರವೇ ಪ್ರಚೋದನೆ ಮಾಡಿದಂತಾಗುತ್ತದೆ. ಮನೆಯ ಪಾಠಕ್ಕೆ ಹೋಗುತ್ತಾರೆ. ಅಥವಾ ಸಾಮೂಹಿಕವಾಗಿ ಪರೀಕ್ಷೆಯಲ್ಲಿ ಕಾಪಿ ಮಾಡಿಸುತ್ತಾರೆ. ಹೀಗಾಗಿ ಸರ್ಕಾರ ಹಿಂದಿ ಸಬ್ಜೆಕ್ಟ್‌ಗೆ ಶಿಕ್ಷಕರ ಹುದ್ದೆ ಮಂಜೂರಾತಿ ಆಗಿಲ್ಲ. ಈ ಬಗ್ಗೆ ನೀವೇನು ಕ್ರಮ ತೆಗೆದುಕೊಂಡಿದ್ದೀರಿ? ನೀವು ಹಿಂದಿ ಶಿಕ್ಷಕರನ್ನು ಒದಗಿಸದೆ ಹಿಂದಿ ವಿಷಯಕ್ಕೆ ಹುದ್ದೆಗಳು ಮಂಜೂರಾಗದೆ ಹಿಂದಿ ವಿಷಯವನ್ನು ಕಡ್ಡಾಯ ಮಾಡಿದ್ದು ಸರಿಯೆ?